ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 113-115.**
**©IIMRD, Mysuru.**
IIMRD JOURNALS

**www.iimrd.com**

# ಬೆಂಗಳೂರಿನ ಪ್ರಾಚೀನ ಗ್ರಂಥಾಲಯಗಳು

**ಅರುಣ್ ಕುಮಾರ್ ಎಂ. ಪಿ.***
*ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ, ಮಂಡ್ಯ.

***ಸಾರಾಂಶ: (Abstract)***

*ಉದ್ಯಾನ ನಗರಿ, ಸಿಲಿಕಾನ್ ಸಿಟಿ, ಮಾಯಾನಗರಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರು ನಗರೀಕರಣ ತಂತ್ರಜ್ಞಾನದ ಅಬ್ಬರದಲ್ಲಿ ವೇಗವಾಗಿ ಚಲಿಸುತ್ತಿದೆ. ಇಂತಹ ಬೆಂಗಳೂರಿಗೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆಯೂ ಇದೆ. ಇಂತಹ ಬೆಂಗಳೂರಿನಲ್ಲಿ ಹಲವಾರು ಗ್ರಂಥಾಲಯಗಳು ಅನೇಕ ವರ್ಷಗಳಿಂದಲೇ ಸ್ಥಾಪನೆಯಾಗಿರುವುದು ಬೆಂಗಳೂರಿಗರ ಓದಿನ ಹವ್ಯಾಸವನ್ನು ಹೆಚ್ಚಿಸುತ್ತಲೇ ಇರುವುದು ವಿಶೇಷ. ಪ್ರಸ್ತುತ ಲೇಖನದಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವ ಜನರ ಓದಿನ ಹಸಿವನ್ನು ನೀಗಿಸುತ್ತಿರುವ ಪ್ರಾಚೀನ ಗ್ರಂಥಾಲಯಗಳ ಬಗ್ಗೆ ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು(Keywords)*** *ಪ್ರಾಚೀನ ಗ್ರಂಥಾಲಯ, ಸಾಮಾಜಿಕ ಕಳಕಳಿ, ಪುಸ್ತಕ ಭಂಡಾರ, ಅಭಿರುಚಿ.*

**ಪೀಠಿಕೆ**

ದೇಶದ ಹಿರಿಮೆ ಮತ್ತು ಸಂಸ್ಕೃತಿಯನ್ನು ಪ್ರಸರಿಸುವುದು ಮತ್ತು ಸ್ವತಂತ್ರ ಭಾರತವನ್ನು ಕಟ್ಟುವ ತುರ್ತಿನಲ್ಲಿ ಅನೇಕ ಸಂಘ ಸಂಸ್ಥೆಗಳು ಸ್ಥಾಪನೆಯಾಗ ತೊಡಗಿದವು. ಸಾರ್ವಜನಿಕವಾಗಿ ಸ್ಥಾಪನೆಯಾದ ಈ ಸಂಸ್ಥೆಗಳು ಹೆಣ್ಣು ಮಕ್ಕಳಿಗಾಗಿ ಶಿಕ್ಷಣ, ರಾಷ್ಟ್ರೀಯ ಪ್ರಜ್ಞೆ, ಸಾರ್ವಜನಿಕ ಚಳುವಳಿ ಹೀಗೆ ಹಲವು ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಈ ಕಾರ್ಯಗಳು ಬೆಂಗಳೂರಿನ ಜನರನ್ನು ಬಹುಬೇಗ ಆಕರ್ಷಿಸಿದ್ದವು. ಜನರಲ್ಲಿ ನಾಡು, ದೇಶ ಪ್ರೇಮ, ಶಿಕ್ಷಣ, ಸಾಮಾಜಿಕ ಕಳಕಳಿಯನ್ನು ಹೆಚ್ಚಿಸುವ ಉದ್ದೇಶದಿಂದ ಹಲವಾರು ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಹೀಗೆ ಪ್ರಾರಂಭವಾದ ಜನರ ಓದುವ ಮತ್ತು ಬರೆಯುವ ಹವ್ಯಾಸ, ವಾಚನಾಭಿರುಚಿಯನ್ನು ಹೆಚ್ಚು ಮಾಡಿತು. ಈ ರೀತಿಯಲ್ಲಿ 'ಪುಸ್ತಕಭಂಡಾರಗಳು', 'ಸರ್ಕ್ಯುಲೇಟಿಂಗ್ ಲೈಬ್ರರಿ'ಗಳು ಜನರಲ್ಲಿ ಮತ್ತಷ್ಟು ವಾಚನ ಅಭಿರುಚಿಯನ್ನು ಬೆಳೆಸುತ್ತಾ ಬಂದವು. ಹೀಗೆ ಸ್ಥಾಪನೆಯಾದ ಪ್ರಮುಖ ಗ್ರಂಥಲಾಯಗಳನ್ನು ಈ ಮುಂದಿನಂತೆ ಹೆಸರಿಸಬಹುದು.

**ಪ್ಲಬಿಕ್ ಲೈಬ್ರರಿ(ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲ್)**

ಇಂದಿನ ಕಬ್ಬನ್ ಪಾರ್ಕ್‌ಲ್ಲಿರುವ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲ್‌ನಲ್ಲಿ ಅಂದಿನ ಬ್ರಿಟಿಷ್ ಮತ್ತು ಅರಮನೆ ಆಡಳಿತ 1915ರಲ್ಲಿ ಪುಸ್ತಕ ಭಂಡಾರ ಮತ್ತು ಸರ್ಕ್ಯುಲೇಟಿಂಗ್ ಲೈಬ್ರರಿಯನ್ನು

*Please cite this article as:* ಅರುಣ್ ಕುಮಾರ್ ಎಂ.ಪಿ. (2023). ಬೆಂಗಳೂರಿನ ಪ್ರಾಚೀನ ಗ್ರಂಥಾಲಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.113–115.*

ಸ್ಥಾಪಿಸಿತು. ಈ ಸಂಸ್ಥೆಯು ಅಂದಿನ ಜನರ ವಾಚನಾಲಯದ ಅಭಿರುಚಿ ಹೆಚ್ಚಿಸುತ್ತಾ ಸಾರ್ವಜನಿಕ ಸಂಸ್ಥೆಯಾಗಿ ಜನರನ್ನು ಆಕರ್ಷಿಸಿತು. ಇಂದಿಗೂ ಕೇಂದ್ರ ಗ್ರಂಥಾಲವಾಗಿ ಕಾರ್ಯನಿರ್ವಹಿಸುತ್ತಿದೆ.

**ಕನ್ನಡ ಸಾಹಿತ್ಯ ಪರಿಷತ್ತು (ಸರಸ್ವತಿ ಭಂಡಾರ)**

ಬೆಂಗಳೂರಿನ ಹೃದಯ ಭಾಗದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು 1915ರಲ್ಲಿ ಸ್ಥಾಪನೆಗೊಂಡಿತು. ಸುಮಾರು 110 ವರ್ಷಗಳ ಕಾಲ ಅಂದರೆ ಒಂದು ಶತಮಾನಕ್ಕೂ ಹೆಚ್ಚಿನ ಕಾಲದಿಂದಲೂ ಕನ್ನಡ ಸೇವೆಯನ್ನು ಮಾಡುತ್ತಾ ಬಂದಿರುವ ಸಂಸ್ಥೆಯಾಗಿದೆ. ಪ್ರಾರಂಭದಲ್ಲಿ ಶಂಕರಪುರಂನ ಪುಟ್ಟದೊಂದು ಬಾಡಿಗೆ ಮನೆಯಲ್ಲಿ ಈ ಸಂಸ್ಥೆ ಪ್ರಾರಂಭವಾಗಿ ಮುಂದೆ ಚಾಮರಾಜ ಪೇಟೆಗೆ 1933ರಲ್ಲಿ ಸ್ಥಳಾಂತರಗೊಂಡಿತು. ಪ್ರಸ್ತುತ ಚಾಮರಾಜ ಪೇಟೆಯ ಪಂಪಮಹಾಕವಿ ರಸ್ತೆಯಲ್ಲಿ ಪರಿಷತ್ತು ಕಾರ್ಯ ನಿರ್ವಹಿಸುತ್ತಿದೆ. ಪುಸ್ತಕ ಪ್ರಕಟಣೆ–ಪ್ರದರ್ಶನ, ನಿಯತಕಾಲಿಕೆಗಳು, ವಿಶೇಷ ಉಪನ್ಯಾಸ, ಸಾಹಿತ್ಯೋತ್ಸವ–ಸಾಂಸ್ಕೃತಿಕ ಕಾರ್ಯಗಳು, ಸಮ್ಮೇಳನಗಳು ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಒಂದು ಶತಮಾನದಿಂದಲೂ ನಿರ್ವಹಿಸಿಕೊಂಡು ಬಂದಿರುವ ಈ ಸಂಸ್ಥೆಯಲ್ಲಿ 'ಸರಸ್ವತಿ ಭಂಡಾರ' ಎಂಬ ಹೆಸರಿನಲ್ಲಿ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಈ ಗ್ರಂಥಾಲಯವು ನಾಡಿನ ಪ್ರಮುಖ ಮತ್ತು ಹಳೆಯ ಗ್ರಂಥಾಲಯಗಳಲ್ಲಿ ಒಂದು. ಅತ್ಯಂತ ಅಪರೂಪವಾಗಿರುವ ಸುಮಾರು 70 ಸಾವಿರಕ್ಕೂ ಹೆಚ್ಚು ಪುಸ್ತಕಗಳು ಅಧ್ಯಯನಕ್ಕೆ ದಕ್ಕುತ್ತವೆ. ಸಂಶೋಧನಾ ವಿಭಾಗದಲ್ಲಿ 20 ಸಾವಿರಕ್ಕಿಂತಲೂ ಹೆಚ್ಚಿನ ಪರಾಮರ್ಶನ ಪುಸ್ತಕಗಳಿವೆ.

**ಮಿಥಿಕ್ ಸೊಸೈಟಿ**

ಈ ಸಂಸ್ಥೆಯನ್ನು 1909ರಲ್ಲಿ ಎಫ್.ಜೆ.ರಿಚರ್ಡ್ಸ್ ಪ್ರಾರಂಭಿಸಿದರು. ಈತ ಅಂದಿನ ಬೆಂಗಳೂರಿನ ಕಂಟೋನ್ಮೆಂಟ್ ವಿಭಾಗದ ಕಲೆಕ್ಟರ್ ಆಗಿ ಕೆಲಸನಿರ್ವಹಿಸುತ್ತಿದ್ದನು ಹಾಗೂ ಈ ಸಂಸ್ಥೆಯನ್ನು ಅಂದಿನ ಒಡೆಯರ್ ಶ್ರೀ ಕೃಷ್ಣರಾಜ ಒಡೆಯರ್ ಮೊದಲ ಪೋಷಕರಾಗಿದ್ದರು. ಸಾಹಿತ್ಯ–ಸಂಸ್ಕೃತಿ–ಇತಿಹಾಸ ಮೊದಲಾದ ವಿಷಯದಲ್ಲಿ ಉಪಯುಕ್ತ ಉಪನ್ಯಾಸ, ಸಂಶೋಧನೆಗೆ ಅವಕಾಶವನ್ನು ಅಂದಿನಿಂದ ಇಂದಿನವರೆಗೂ ಕಲ್ಪಿಸಿಕೊಡುತ್ತಾ ಬಂದಿರುವ ಸಂಸ್ಥೆ ಇದಾಗಿದೆ. ಜನರ ಮನಸ್ಸನ್ನು ಲಲಿತಕಲೆಗಳು, ಇತಿಹಾಸ, ಸಾಹಿತ್ಯ, ಆಧ್ಯಾತ್ಮ ವಿಚಾರಗಳ ಕಡೆ ಸೆಳೆಯಲು 'ಮಿಥಿಕ್ ಸೊಸೈಟಿ' ನಿರಂತರವಾಗಿ ಕೆಲಸ ಮಾಡುತ್ತಿದೆ. ಇಲ್ಲಿನ ಗ್ರಂಥಾಲಯಲದಲ್ಲಿ ಸುಮಾರು 46,000 ಹೆಚ್ಚು ಪುಸ್ತಕಗಳ ಸಂಗ್ರಹವಿದೆ. ಇಂದಿಗೂ ವಿದ್ವಾಂಸರಿಗೆಲ್ಲರಿಗೂ ಪರಿಚಿತವಿರುವ ಈ ಗ್ರಂಥಾಲಯ ದಕ್ಷಿಣ ಭಾರತದಲ್ಲಿ ಇಂಡಿಯನ್ ಅಧ್ಯಯನಗಳ ಪ್ರವರ್ತಕ ಸಂಸ್ಥೆಯಾಗಿದೆ.

**ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ**

ಸಾರ್ವಜನಿಕ ವಿಚಾರ ಸಂಸ್ಥೆಯಾಗಿ ಸ್ಥಾಪನೆಯಾದ ಮತ್ತೊಂದು ಸಂಸ್ಥೆ ಗೋಖಲೆ ಸಂಸ್ಥೆ. 1915ರಲ್ಲಿ ಗೋಖಲೆ ಅವರ 'ಪಬ್ಲಿಕ್ ಲೈಫ್ ಮಸ್ಟ್ ಬಿ ಸ್ಪಿರಿಚ್ಯುಯಲೈಸ್ಡ್' (ಸಾರ್ವಜನಿಕ ಬದುಕಿಗೆ ಆಧ್ಯಾತ್ಮದ ಲೇಪ ಬರಬೇಕು) ಎಂಬ ಧ್ಯೇಯ ವಾಕ್ಯದಲ್ಲಿ ಲೋಕಮಾನ್ಯ ಗೋಪಾಲ ಕೃಷ್ಣ ಗೋಖಲೆ ಅವರ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವ ಹಿನ್ನೆಲೆಯಲ್ಲಿ ಡಿ.ವಿ.ಗುಂಡಪ್ಪನವರು ಈ ಸಂಸ್ಥೆಯನ್ನು ಆರಂಭಿಸಿದರು. ವ್ಯಕ್ತಿತ್ವ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಈ ಸಂಸ್ಥೆಯು ಪುಸ್ತಕಗಳ ಸಂಗ್ರಹವನ್ನು

ಪ್ರಾರಂಭಿಸಿ ಹಿರಿಯರು, ಬುದ್ದಿಜೀವಿಗಳು, ವಿದ್ವಾಂಸರ ಅಧ್ಯಯನಕ್ಕೆ ಬೇಕಾದ ಪುಸ್ತಕ ಭಂಡಾರವನ್ನು ಹೊಂದಿದೆ. ಸಾಹಿತ್ಯ, ಸಾಂಸ್ಕೃತಿಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತ ಪುಸ್ತಕಗಳ ಓದು, ಸಂಗ್ರಹಗಳ ಮೂಲಕ ಹೊಸ ತಲೆಮಾರಿಗೆ ಸಾಂಸ್ಕೃತಿಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ.

**ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ**

ಕನ್ನಡದ ಕಣ್ವ ಎಂದು ಪ್ರಸಿದ್ದರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ಎಂ.ವಿ.ಸೀತರಾಮಯ್ಯ ಅವರು 1979ರಲ್ಲಿ ಸ್ಥಾಪನೆ ಮಾಡಿದರು. ಸಾಹಿತ್ಯ, ಸಂಶೋಧನೆ ಹಸ್ತಪ್ರತಿಗಳ ಅಧ್ಯಯನ, ಸಂರಕ್ಷಣೆ ಮೊದಲಾದ ಕೆಲಸಗಳನ್ನು ಮಾಡುವ ಗುರಿ ಇಟ್ಟುಕೊಂಡು ಸ್ಥಾಪನೆಯಾದ ಸ್ಮಾರಕ ಪ್ರತಿಷ್ಠಾನ. ಸಂಶೋಧನೆ ಮತ್ತು ಅಧ್ಯಯನಕ್ಕೆ ಬೇಕಾದ ಅತ್ಯಮೂಲ್ಯ ಪುಸ್ತಕ ಭಂಡಾರ ಮತ್ತು ಹಸ್ತಪ್ರತಿ ಭಂಡಾರವನ್ನು ಈ ಸಂಸ್ಥೆ ಹೊಂದಿದೆ.

**ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ಸ್**

ವಾಡಿಯಾ ದಂಪತಿಗಳ ಕನಸಾಗಿ 1945ರಲ್ಲಿ ಬಸವನಗುಡಿಯಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಅಮೇರಿಕ, ಜಪಾನ್, ಚೀನಾ, ಜರ್ಮನಿ, ಇಂಗ್ಲೆಂಡ್ ಮುಂತಾದ ದೇಶಗಳ ಸಮಗ್ರ ಗ್ರಂಥಗಳು ಸೇರಿ ಸುಮಾರು 8000ಕ್ಕೂ ಹೆಚ್ಚಿನ ಗ್ರಂಥಗಳು ಸಂಗ್ರಹವಾಗಿದೆ. ಹನ್ನೊಂದು ಸಾವಿರಕ್ಕೂ ಹೆಚ್ಚಿನ ಮಕ್ಕಳ ಪುಸ್ತಕಗಳ ಸಂಗ್ರಹವಿದ್ದು ಮಕ್ಕಳ ಗ್ರಂಥಾಲಯವನ್ನು ಕಾಣಬಹುದು. 400ಕ್ಕೂ ಹೆಚ್ಚು ದೇಶ–ವಿದೇಶಗಳ ಪತ್ರಿಕೆಗಳು ಅಧ್ಯಯನಕ್ಕೆ ಒದಗುತ್ತದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಉಪಯುಕ್ತ ಪರಾಮರ್ಶನ ಗ್ರಂಥಗಳಿವೆ.

**ಅಲಿಯಾನ್ಸ್ ಫ್ರಾನ್ಸೇ**

ಭಾರತ–ಫ್ರಾನ್ಸ್‌ನ ಸಾಂಸ್ಕೃತಿಕ ಕೇಂದ್ರವಾಗಿ ಹಾಗೂ ಎರಡು ದೇಶಗಳ ಸ್ನೇಹ ಸಂಬಂಧವನ್ನು ಇಮ್ಮಡಿಗೊಳಿಸುವ ಉದ್ದೇಶದಿಂದ 1970ರಲ್ಲಿ ಸ್ಥಾಪನೆಯಾಯಿತು. ಬೆಂಗಳೂರಿನ ದಂಡು ರೈಲ್ವೆ ನಿಲ್ದಾಣದ ಎದುರಿಗೆ 'ಅಲಿಯಾನ್ಸ್ ಫ್ರಾನ್ಸೇ' ಸಂಸ್ಥೆಯನ್ನು ಸ್ಥಾಪಿಸಲಾಯಿತು. ಫ್ರೆಂಚ್ ಭಾಷೆಯನ್ನು ಕಲಿಯಲು ಇಚ್ಛಿಸುವವರಿಗೆ ಇಲ್ಲಿ ಅವಕಾಶವಿದೆ. ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ ಕೋರ್ಸ್‌ಗಳಿವೆ. ಇಲ್ಲಿನ ಗ್ರಂಥ ಭಂಡಾರದಲ್ಲಿ ಐದುಸಾವಿರಕ್ಕೂ ಹೆಚ್ಚಿನ ಪುಸ್ತಕ ಸಂಗ್ರಹಗಳಿವೆ. ಇತ್ತೀಚೆಗೆ ಫ್ರೆಂಚ್ ಪತ್ರಿಕೆಗಳು, ನಿಯತಕಾಲಿಕೆಗಳು ಓದಲು ಲಭ್ಯವಿದೆ. ಮನೆಯಲ್ಲಿ ಪುಸ್ತಕಗಳನ್ನು ಓದಲು ಮತ್ತು ಧ್ವನಿಸುರುಳಿಗಳನ್ನು ಕೇಳಲು ಠೇವಣಿಯನ್ನು ಕೊಟ್ಟು ತೆಗೆದುಕೊಂಡು ಹೋಗಬಹುದು. ಹೀಗೆ ಈ ಎಲ್ಲಾ ಸಂಸ್ಥೆಗಳು ಸಾಹಿತ್ಯ ಚಟುವಟಿಕೆಗಳು, ಕನ್ನಡ ಭಾಷಾ ಬಳಕೆ ಮತ್ತು ನಾಡು–ನುಡಿಯ ಏಳಿಗೆಗೆ ಶ್ರಮವಹಿಸುವುದರ ಜೊತೆಗೆ ಪುಸ್ತಕಗಳ ಸಂಗ್ರಹ, ಪುಸ್ತಕಗಳ ಪ್ರಕಟ ಮತ್ತು ಪುಸ್ತಕಗಳ ಓದುವ ಹವ್ಯಾಸವನ್ನು ಜನರಲ್ಲಿ ಹೆಚ್ಚಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂದಿಗೂ ಈ ಸಂಸ್ಥೆಗಳು ಅತ್ಯಮೂಲ್ಯ ಪುಸ್ತಕ ಭಂಡಾರವನ್ನು ಹೊಂದಿದ್ದು ಉಪಯುಕ್ತ ಗ್ರಂಥಾಲಯಗಳಾಗಿ ಕಾರ್ಯನಿರ್ವಹಿಸುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಬೆಂಗಳೂರು ದರ್ಶನ. (2005). ಉದಯಭಾನು ಕಲಾಸಂಘ, ಬೆಂಗಳೂರು.
- ಸುಂದರಂ ಬ. ನ. (2014). ಇತಿಹಾಸ, ಅಂಕಿತ ಪುಸ್ತಕ, ಬೆಂಗಳೂರು.